## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

ಸಿಸಿ ನಂ ಃ 181/2021
ಸಿಡಬ್ಲು ಃ 1
ಪಿಡಬ್ಲು ಃ 1

ಹೆಸರು ಃ ಮಂಜುನಾಥ ವಿಲಾಸ ಬಡಿಗೇರ
ವಯಾ ಃ 43 ವರ್ಷ
ಉದ್ಯೋಗ ಃ ಪಿ ಐ, ಸಿಸಿಆರ್‌ಬಿ , ಬೆಳಗಾವಿ ನಗರ
ವಾಸ ಃ ಬೆಳಗಾವಿ

(ದಿನಾಂಕಃ 20-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)

**ಮುಖ್ಯ ವಿಚಾರಣೆ ಸಸಅಃರವರಿಂದಃ**

ನಾನು 2013 ರಿಂದ 2015 ರವರೆಗೆ ವಿಶೇಷ ಅಲಾನಿದಳ ಗೋಕಾಕನಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 06-09-2014 ರಂದು ಮಧ್ಯಾಹ್ನ 14.30 ಕ್ಕೆ ನಾನು ಠಾಣೆಯಲ್ಲಿದ್ದಾಗ ಚಾಸಾ-4 ರವರು ರಾಜಕಟ್ಟಿಯಲ್ಲಿ ಈರಪ್ಪ ರೋಣಿ ಎನ್ನುವವರು ಕಳ್ಳಬಟ್ಟಿ ಸಾರಾಯಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಅವರ ಜೊತೆ ಚಾಸಾ.5 ಮತ್ತು 6 ರವರು ಇರುತ್ತಾರೆ ಎಂದು ಹೇಳಿರುತ್ತಾರೆ. ನಾನು ಅವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬಾಳಯ್ಯಜ್ಜನ ಮಠದಲ್ಲಿ ಇರಲು ತಿಳಿಸಿರುತ್ತೇನೆ. 14.40 ಗಂಟೆಗೆ ಕಛೇರಿಯಿಂದ ಹೊರಟು 15.30 ಕ್ಕೆ ಬಾಳಯ್ಯಜ್ಜನ ಮಠದ ಹತ್ತಿರ ತಲುಪಿರುತ್ತೇವೆ. ನಾನು ಇಬ್ಬರು ಪಂಚರಿಗೆ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದ್ದು ಅವರು ಒಪ್ಪಿದ್ದು ವಾಹನವನ್ನು ಅಲ್ಲಿಯೇ ನಿಲ್ಲಿಸಿ ಸುಮಾರು 1 ಕಿ.ಮೀ ನಡೆದುಕೊಂಡು ಹೋಗಿ ಬಾತ್ಮಿ ಇದ್ದ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿ ಒಬ್ಬ ವ್ಯಕ್ತಿ ಟ್ಯೂಬಿನಲ್ಲಿ ಸಾರಾಯಿ ತೆಗೆದುಕೊಂಡು ಹೋಗುತ್ತಿದ್ದದ್ದು ಕಂಡುಬಂತು. ಆತನು ನಮ್ಮನ್ನು ನೋಡಿ ಟ್ಯೂಬನ್ನು ಅಲ್ಲೇ ಬಿಸಾಗಿ ಓಡಿ ಹೋಗಿರುತ್ತಾನೆ. ಚಾಸಾ.5 ಮತ್ತು 6 ರವರು ಹಿಡಿಯಲು ಪ್ರಯತ್ನಿಸಿದ್ದು ಆತ ಸಿಕ್ಕಿರುವುದಿಲ್ಲ.

ನಂತರ ಸಿಬ್ಬಂದಿಗಳು ವಾಪಸ ಬಂದು ಆರೋಪಿಯ ಹೆಸರು ಈರಪ್ಪ ರೋಣಿ ಸಾಃ ರಾಜಕಟ್ಟಿ ಎಂದು ತಿಳಿಸಿರುತ್ತಾರೆ. ಸದರಿ ಟ್ಯೂಬನ್ನು ಪರಿಶೀಲಸಿ ನೋಡಲಾಗಿ ಘಾಟ ವಾಸನೆ ಕಂಡುಬಂದಿದ್ದು , ಅದರಲ್ಲಿ 25 ಲೀಟರಿನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂದಿರುತ್ತದೆ. ಇದು ಕಳ್ಳಭಟ್ಟಿ ಸಾರಾಯಿ ಸಾಗಾಟ ಪ್ರಕರಣ ಎಂದು ಪಂಚರಿಗೆ

ತಿಳಿಸಿ ಸಿಕ್ಕಂತಹ ಮುದ್ದೆಮಾಲಿನಿಂದ ಸ್ಯಾಂಪಲಗಾಗಿ 180 ಮಿಲಿಯ ಸಾರಾಯಿ ಬಾಟಲಿಯಲ್ಲಿ ತೆಗೆದು ಬಿಳಿ ಬಟ್ಟೆ ಸುತ್ತಿ ಅರಗಿನಿಂದ ಶೀಲು ಮಾಡಲಾಯಿತು. ಮಾದರಿ ಚೀಟಿಗಳ ಮೇಲೆ ನನ್ನ ಮತ್ತು ಪಂಚರ ಸಹಿಗಳನ್ನು ಪಡೆಯಲಾಯಿತು. ಪಂಚನಾಮೆಯನ್ನು 16.00 ರಿಂದ 17.00 ಗಂಟೆಯವರೆಗೆ ಸ್ಥಳದಲ್ಲಿ ಬರೆದು ಮುಗಿಸಲಾಯಿತು. ನಂತರ ಸಿಕ್ಕಂತಹ ಮುದ್ದೆಮಾಲು ತೆಗೆದುಕೊಂಡು ಕಛೇರಿಗೆ ಬಂದು ಸರಕಾರದ ಪರವಾಗಿ ಫಿರ್ಯಾದನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ದಾಳಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲನ್ನು ನಿಪಿ-2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸಹಿಗಳುಳ್ಳ ಚೀಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-4 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ರಾಸಾಯನಿಕ ಪರಿಕ್ಷೆಗಾಗಿ ತೆಗೆದ ಮುದ್ದೆಮಾಲನ್ನು ನೋಡಿ ಗುರುತಿಸುತ್ತಾರೆ. ಅದನ್ನು ಮುಮಾ-1 ಎಂದು ಗುರುತಿಸಲಾಯಿತು.

ಸಾಕ್ಷಿಯು ಆರೋಪಿಯನ್ನು ಗುರುತಿಸಿದ ಬಗ್ಗೆ ನೀಡಿದ ಪುನಃಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟಿ ಸವಾಲುಃ ಶ್ರೀ ಪಿ ಎ ಪಿ ಆರೋಪಿ ಪರ ವಕೀಲರಿಂದ -</u>

ರಾಜಕಟ್ಟಿಯಿಂದ ಬಾಳಯ್ಯಜ್ಜನ ಮಠ ಸುಮಾರು 1.5 ಕಿ.ಮೀ ದೂರದಲ್ಲಿದೆ. ಘಟನಾ ಸ್ಥಳ ಎಂದು ಹೇಳುವ ಸ್ಥಳ ರಾಜಕಟ್ಟಿಯಿಂದ ಸುಮಾರು 0.5 ಕಿ.ಮೀ ದೂರದಲ್ಲಿದೆ. ರಾಜಕಟ್ಟಿಯಿಂದ ಬಾಳಯ್ಯಜ್ಜನ ಮಠದವರೆಗೆ ಅರಣ್ಯಪ್ರದೇಶ ಇಲ್ಲ ಎಂದರೆ ಸರಿ . ರಾಜಕಟ್ಟಿ ಗ್ರಾಮದ ಅರಣ್ಯದ ಮಧ್ಯ ಇದೆ ಎಂದರೆ ಸರಿಯಲ್ಲ. ಘಟನಾ ಸ್ಥಳ ರಾಜಕಟ್ಟಿಯಿಂದ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ನೆನಪಿಲ್ಲ. ರಾಜಕಟ್ಟಿ ಮತ್ತು ಬಾಳಯ್ಯಜ್ಜನ ಮಠದ ಮಧ್ಯದಲ್ಲಿ ಘಟನಾ ಸ್ಥಳ ಬರುತ್ತದೆ. ಘಟನಾ ಸ್ಥಳದ ನಕ್ಷೆ ಅಥವಾ ಭಾವಚಿತ್ರ ತೆಗೆದಿರುವುದಿಲ್ಲ. ಘಟನಾ ಸ್ಥಳ ರಸ್ತೆ ಬಿಟ್ಟು ಗುಡ್ಡದ ಮೇಲೆ ಇರುತ್ತದೆ. ರಸ್ತೆಯಿಂದ 0.5 ಕಿ.ಮೀ ದೂರದಲ್ಲಿರುತ್ತದೆ.

ನಾವು ದಾಳಿಗೆ ಹೋಗುವಾಗ ಆರೋಪಿಯ ಮುಖಚೆಹರೆ ಗುರುತಿಸಲು ಭಾವಚಿತ್ರ ಇರಲಿಲ್ಲ. ನಮ್ಮ ಸಿಬ್ಬಂದಿಯವರ ಹತ್ತಿರವೂ ಸಹ ಆರೋಪಿಯ ಯಾವುದೇ ಭಾವಚಿತ್ರ ಇರಲಿಲ್ಲ. ಅವರು ಈ ಮುಂಚೆ ಆ ವ್ಯಕ್ತಿಯನ್ನು ನೋಡಿದ್ದರು. ಈರಪ್ಪ ರೋಣಿರವರ ಮೇಲೆ ಈ ಮುಂಚೆ ಯಾವುದೇ ಪ್ರಕರಣಗಳು ಆಗಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಟ್ಯೂಬ ಕಪ್ಪು ಬಣ್ಣದ್ದಾಗಿತ್ತು. ಟ್ಯುಬು ಟ್ರಕನದ್ದು ಇರಬಹುದು. ಟ್ರಕ ಟ್ಯೂಬನಲ್ಲಿ ಸುಮಾರು 50 ಲೀಟರನಷ್ಟು ನೀರು ಹಿಡಿಯುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಗೋಕಾಕನಿಂದ ರಾಜಕಟ್ಟಿಗೆ ಬರಲು ಸುಮಾರು 1.5 ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ದಿಃ 06-09-2014 ರಂದು ಬಾತ್ಮಿ ಬಂದ ಪ್ರಕಾರ ಬಾಳಯ್ಯಜ್ಜನ ಮಠ ರಾಜಕಟ್ಟಿಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಂಚರು ಒಬ್ಬರು ರಾಜಕಟ್ಟಿ ಇನ್ನೊಬ್ಬರು ಪಣಗುತ್ತಿಯವರಿದ್ದರು. ರಾಜಕಟ್ಟಿ ಪಣಗುತ್ತಿ 0.5 ಕಿ.ಮೀ ದೂರದಲ್ಲಿದೆ ಎಂದರೆ ಸರಿಯಲ್ಲ. ರಸ್ತೆಯ ಆ ಕಡೆ ರಾಜಕಟ್ಟಿ ಮತ್ತು ಈ ಕಡೆ ಪಣಗುತ್ತಿ ಇರುತ್ತದೆ. ಪಂಚರಿಗೆ ನಾನು ನೋಟಿಸ ಕೊಟ್ಟಿರುವುದಿಲ್ಲ, ಅವರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ. ಮಾಹಿತಿ ಬಂದ ಕೂಡಲೇ ಠಾಣೆಯಲ್ಲಿ ನಾನು ದೂರು ಕೊಟ್ಟಿರುವುದಿಲ್ಲ. ಗ್ರಾಮಪಂಚಾಯತಿ ಅಧ್ಯಕ್ಷರು ಹಾಗೂ ಸಿಬ್ಬಂದಿಯವರ ಸಹಾಯ ತೆಗೆದುಕೊಂಡಿರುವುದಿಲ್ಲ.

ನಾವು ಆ ದಿನ ಯಾವುದೇ ದಾಳಿಗೆ ಹೋಗಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿ ಮಧ್ಯವನ್ನು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆ ಅಂಕಿ ಅಂಶಗಳನ್ನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ